**A** SL. No. : Q

ಒಟ್ಟು ಪ್ರಶ್ನೆಗಳ ಸಂಖ್ಯೆ : 46 ]
Total No. of Questions : 46 ]

**CCE RR REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 62-K** **Code No. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 28. 06. 2018 ] [ Date : 28. 06. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-00 ರವರೆಗೆ ] [ Time : 9-30 A.M. to 12-00 Noon

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 46 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಭಾಗ – 'ಎ'

### (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲಿ ಉತ್ತರಿಸಿ :** 10 × 1 = 10

1. ಅಮೇರಿಕಾದ ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿವೇಳೆ ತಂಗಿದರೆ ಏನು ಮಾಡುತ್ತಾರೆ ?
2. 1942 ರಲ್ಲಿ ಮೋಹನಪುರದಲ್ಲಿ ನಡೆದ ಚಳುವಳಿ ಯಾವುದು ?
3. ಪೋರ್ಚುಗೀಸರು ಕೇಳಿದ ಬೆಲೆಗೆ ವಸ್ತುಗಳನ್ನು ಕೊಡಲು ಅಬ್ಬಕ್ಕದೇವಿ ಒಪ್ಪದಿರಲು ಕಾರಣವೇನು ?
4. ಹೆಂಡತಿಯ ಬಲವಂತಕ್ಕಾಗಿ ಬೀಚಿಯವರು ಓದಿದ ಪುಸ್ತಕ ಯಾವುದು ?
5. ಬೀಚಿಯವರ ತಿಮ್ಮನಿಗೂ, ಡಿ.ವಿ.ಜಿ.ಯವರ ತಿಮ್ಮನಿಗೂ ಇರುವ ವ್ಯತ್ಯಾಸವೇನು ?
6. ಸಿ.ಪಿ.ಕೆ.ಯವರು 'ಅಹಂಕಾರವು ನುಚ್ಚುನೂರಾಗುವ ತಾಣ' ಯಾವುದೆಂದು ಹೇಳಿದ್ದಾರೆ ?
7. ಬಸವಣ್ಣನವರ ಪ್ರಕಾರ ಮರ್ತ್ಯಲೋಕ ಯಾವುದು ?
8. ಪುರಂದರದಾಸರು ಡಾಂಭಿಕ ಭಕ್ತನನ್ನು 'ನಾಟಕ ಸ್ತ್ರೀ' ಎಂದು ಕರೆದಿರುವುದು ಮೆಚ್ಚುವಂತಹದ್ದೇಕೆ ?
9. ಪುಲಿಗೆರೆ ಸೋಮನಾಥರವರು ಎಂಥವನು ಮಗನಲ್ಲ ಎಂದಿದ್ದಾರೆ ?
10. ಧರ್ಮಪದನಿಗೆ ವಿಷ ಉಣಿಸಲು ಪ್ರಯತ್ನಿಸಿದ್ದು ಏಕೆ ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 10 × 2 = 20

11. ಗಾಂಧೀಜಿಯವರು ಗೌರಮ್ಮನವರ ಮನೆಗೆ ಬಂದದ್ದು ಏಕೆ ?
12. ಕೊಡಗಿನ ಗೌರಮ್ಮನವರ ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ವಿಚಾರಗಳನ್ನು ಕುರಿತು ಬರೆಯಿರಿ.
13. ಶಿಶುನಾಳ ಶರೀಫರು ತಮಗಾದ ದುಃಖವನ್ನು ಹೇಗೆ ಕಡಿಮೆ ಮಾಡಿಕೊಂಡರು ?
14. ಶಿಶುನಾಳ ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಬೆರೆತು ಹೋಗಿತ್ತು ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
15. 'ವಿಶ್ವಾಮಿತ್ರ ಸೃಷ್ಟಿ'ಯು ಬೀಚಿಯವರ ಮೇಲೆ ಯಾವ ರೀತಿ ಪ್ರಭಾವವನ್ನು ಬೀರಿದೆ ?
16. ಸತೀಶ ಕುಲಕರ್ಣಿಯವರು ಎಂತಹ ನಾಡನ್ನು ಕಟ್ಟುತ್ತೇವೆ ಎಂದು ಆತ್ಮವಿಶ್ವಾಸದಿಂದ ಹೇಳಿದ್ದಾರೆ ?
17. 'ಕಟ್ಟತೇವ ನಾವು' ಕವಿತೆಯು ಕ್ರಾಂತಿಕಾರಿಗಳ ಕನಸಿನ ಹಾಡನ್ನು ಹೇಗೆ ಕಟ್ಟಲು ಬಯಸುತ್ತಿದೆ ?
18. ರೈತನು ದನಕರುಗಳ ಸ್ಥಿತಿ ಹೇಗಾಗಿದೆ ಎಂದು ಮಳೆರಾಯನಲ್ಲಿ ಏನೆಂದು ನಿವೇದಿಸಿಕೊಂಡಿದ್ದಾನೆ ?
19. ಮೋಡಗಳನ್ನು ಕಂಡ ರೈತರ ಸಂಭ್ರಮವನ್ನು ಜನಪದರು ವರ್ಣಿಸಿರುವ ರೀತಿ ಮೆಚ್ಚುವಂತಹದ್ದು ಏಕೆ ?
20. ಈರಪ್ಪ ಎಂ. ಕಂಬಳಿಯವರಿಗೆ ತಾವು ಆನೆಯಂಬಾರಿ ಏರಿದಂತೆ ಭಾಸವಾಗಲು ಕಾರಣವೇನು ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ :** 2 × 3 = 6

21. "ಒಂದು ಪಿಳ್ಳೆ ಜೀವಂತವಿರುವವರೆಗೆ, ನಿಮ್ಮ ಆಜ್ಞೆ ನಡೆಯಲಾರದು ಇಲ್ಲಿ."

22. "ಮುದುಡಿ ಹೋಗುವುದಿಲ್ಲ; ನನ್ನ ಅಹಂಕಾರ"

23. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಕಂಚುಗಾರನ ..........................................................

................................................................. ನೆರಹಿ

ಮಿಂಚಬೇಕೆಂದು ......................................................

...................................................... ಮಾಡುವುದು

***ಅಥವಾ***

ನಾನು ಎಂಬುದ ....................................................

.................................................... ಪ್ರೇರಣೆಯೆಂದು

.......................... ಮೌನದಿ ..................................

................................................. ಕಾರ್ಯಗಳೆಲ್ಲವು

**ಈ ಕೆಳಗಿನ ಕವಿ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

24. ಗೊರೂರು ರಾಮಸ್ವಾಮಿ ಅಯ್ಯಂಗಾರ್

25. ಬಸವಣ್ಣ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

26. ಅಬ್ಬಕ್ಕದೇವಿಯು ಸಪ್ತಸಮುದ್ರದಾಚೆ ವಿಖ್ಯಾತಳಾದುದು ಹೇಗೆ ?

***ಅಥವಾ***

ಕಿತ್ತೂರು ರಾಣಿ ಚೆನ್ನಮ್ಮನ ಸ್ವಾಭಿಮಾನ ಮತ್ತು ದೇಶಾಭಿಮಾನ ಕುರಿತು ಬರೆಯಿರಿ.

27. 'ಮನುಜ ಜಾತಿ ತಾನೊಂದೆ ವಲಂ' ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

***ಅಥವಾ***

'ಭೂಮಿತಾಯ ಕುಡಿಗಳು' ಈ ಕವನದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $12 \times 1 = 12$

28. ಈ ಕೆಳಗಿನವುಗಳಲ್ಲಿ ಸಜಾತೀ ಸಂಯುಕ್ತಾಕ್ಷರದಿಂದ ಕೂಡಿದ ಪದ

    (ಎ) ರಕ್ತ (ಬಿ) ವರ್ಣ

    (ಸಿ) ರಾಜ್ಯ (ಡಿ) ಅಪ್ಪ

29. 'ವಿಜ್ಞಾನಿ' ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ

    (ಎ) ಅಂಕಿತ (ಬಿ) ಅನ್ವರ್ಥಕ

    (ಸಿ) ರೂಢ (ಡಿ) ಸರ್ವನಾಮ

30. ಕ್ರಿಯಾಪದದ ಮೂಲರೂಪ

    (ಎ) ಧಾತು (ಬಿ) ನಾಮ ಪ್ರಕೃತಿ

    (ಸಿ) ವಿಭಕ್ತಿ (ಡಿ) ನಾಮಪದ

31. 'ಕವಿ' ಪದದ ಅನ್ಯಲಿಂಗ ರೂಪ

    (ಎ) ಕವಿಯಿತ್ರಿ (ಬಿ) ಕವಯಿತ್ರಿ

    (ಸಿ) ಕವಿಯತ್ರಿ (ಡಿ) ಕವಿತ್ರಿ

32. 'ಮಗು' ಪದದ ಬಹುವಚನ ರೂಪ

    (ಎ) ಮಕ್ಕಳಂದಿರು (ಬಿ) ಮಗುಗಳು

    (ಸಿ) ಮಕ್ಕಳು (ಡಿ) ಮಕ್ಕಳಿರು

33. 'ಸದಭಿರುಚಿ' ಈ ಪದವನ್ನು ಬಿಡಿಸಿ ಬರೆದಾಗ ಆಗುವ ಸಂಧಿ

    (ಎ) ಗುಣ ಸಂಧಿ (ಬಿ) ಯಣ್ ಸಂಧಿ

    (ಸಿ) ಅನುನಾಸಿಕ ಸಂಧಿ (ಡಿ) ಜಶ್ತ್ವ ಸಂಧಿ

34. 'ಮುಕ್ಕಣ್ಣ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(ಎ) ದ್ವಂದ್ವ ಸಮಾಸ (ಬಿ) ತತ್ಪುರುಷ ಸಮಾಸ

(ಸಿ) ಬಹುವ್ರೀಹಿ ಸಮಾಸ (ಡಿ) ಗಮಕ ಸಮಾಸ

35. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸಲು ಬಳಸುವ ಚಿಹ್ನೆ

(ಎ) ಉದ್ಧರಣ (ಬಿ) ಆವರಣ

(ಸಿ) ಪ್ರಶ್ನಾರ್ಥಕ (ಡಿ) ವಾಕ್ಯವೇಷ್ಟನ

36. 'ಬೇಗಬೇಗ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(ಎ) ಜೋಡುನುಡಿ (ಬಿ) ಕ್ರಿಯಾಪದ

(ಸಿ) ದ್ವಿರುಕ್ತಿ (ಡಿ) ಅನುಕರಣಾವ್ಯಯ

37. 'ಮಗುವಿನ ಮುಖಕಮಲ ಅರಳಿತು' ಎಂಬ ವಾಕ್ಯವು ಈ ಅಲಂಕಾರಕ್ಕೆ ಉದಾಹರಣೆಯಾಗಿದೆ

(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ

(ಸಿ) ದೃಷ್ಟಾಂತಾಲಂಕಾರ (ಡಿ) ಉತ್ಪ್ರೇಕ್ಷಾಲಂಕಾರ

38. 'ಆಸಕ್ತಿ' ಪದದ ವಿರುದ್ಧ ಪದ

(ಎ) ನಿರಾಸಕ್ತಿ (ಬಿ) ಅನಾಶಕ್ತಿ

(ಸಿ) ದುರಾಸಕ್ತಿ (ಡಿ) ನಿಶ್ಶಕ್ತಿ

39. 'ಹಿಮಾಲಯದಲ್ಲಿ' ಈ ಪದದಲ್ಲಿರುವ ವಿಭಕ್ತಿ

(ಎ) ಷಷ್ಠೀ (ಬಿ) ತೃತೀಯಾ

(ಸಿ) ಚತುರ್ಥೀ (ಡಿ) ಸಪ್ತಮೀ

## ವಿಭಾಗ – 'ಸಿ'

### (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 4 × 1 = 4

ಬಿ.ವಿ. ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬಾಬುಕೋಡಿ ಎಂಬ ಗ್ರಾಮದಲ್ಲಿ ೧೯೨೯ ರಲ್ಲಿ ಜನಿಸಿದರು. ಆರ್ಥಿಕವಾಗಿ ಬಡತನವಿದ್ದರೂ ಸಾಂಸ್ಕೃತಿಕವಾಗಿ ಬಡತನವಿರಲಿಲ್ಲ. ಅವರ ತಂದೆ ನಾರಣಪ್ಪ, ತಾಯಿ ಲಕ್ಷ್ಮಮ್ಮ. ಸಂಗೀತ, ನಾಟಕ ಮತ್ತು ಓದು ಈ ಮೂರು ಕಾರಂತರಿಗೆ ಆಸಕ್ತಿಯ ವಿಷಯವಾಗಿತ್ತು. ಒಮ್ಮೆ ಸೈಕಲ್‌ನಲ್ಲಿ ಕೃಷ್ಣಲೀಲಾ ನಾಟಕವನ್ನು ನೋಡಲು ಮಂಗಳೂರಿಗೆ ಹೋಗಿದ್ದರು. ಮನೆಯ ಆರ್ಥಿಕ ಪರಿಸ್ಥಿತಿ ಸರಿ ಇರದ ಕಾರಣ ಎಂಟನೆಯ ತರಗತಿ ಓದುವ ಹೊತ್ತಿಗೆ ಶಾಲೆಯನ್ನು ಬಿಡಬೇಕಾಗಿ ಬಂತು.

*ಪ್ರಶ್ನೆಗಳು :*

40. ಕಾರಂತರಿಗೆ ಯಾವುದರಲ್ಲಿ ಬಡತನವಿರಲಿಲ್ಲ ?

41. ಕಾರಂತರು ಮಂಗಳೂರಿಗೆ ಏಕೆ ಹೋದರು ?

42. ಕಾರಂತರಿಗೆ ಯಾವ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಇತ್ತು ?

43. ಕಾರಂತರು ಏಕೆ ಶಾಲೆ ಬಿಡಬೇಕಾಯಿತು ?

44. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** 1 × 3 = 3

* ಹಾಸಿಗೆ ಇದ್ದಷ್ಟು ಕಾಲು ಚಾಚು
* ಕೈ ಕೆಸರಾದರೆ ಬಾಯಿ ಮೊಸರು
* ದೇಶ ಸುತ್ತು; ಕೋಶ ಓದು

45. ನಿಮ್ಮನ್ನು ಶಿರಸಿಯ ಮಾರಿಕಾಂಬ ಪ್ರೌಢಶಾಲೆಯಲ್ಲಿ ಓದುತ್ತಿರುವ 'ದರ್ಶನ್ / ರಂಜನಿ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆಯುವ ಶಾಲಾ ವಾರ್ಷಿಕೋತ್ಸವ ಸಮಾರಂಭಕ್ಕೆ ಆಹ್ವಾನಿಸಿ, ಕಾರವಾರದಲ್ಲಿರುವ ನಿಮ್ಮ ತಂದೆಗೆ ಪತ್ರವೊಂದನ್ನು ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ಮೈಸೂರಿನಲ್ಲಿರುವ 'ವಿನಯ್ / ಭೂಮಿಕ' ಎಂದು ಭಾವಿಸಿಕೊಂಡು, ನಿಮ್ಮ ಊರಿನ ಬೀದಿದೀಪ ದುರಸ್ತಿಪಡಿಸುವಂತೆ ಕೋರಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರವೊಂದನ್ನು ಬರೆಯಿರಿ.

46. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

- ✳ ಗ್ರಂಥಾಲಯದ ಮಹತ್ವ
- ✳ ಗಣಕಯಂತ್ರದಿಂದ ವಿದ್ಯಾರ್ಥಿಗಳಿಗೆ ಆಗುವ ಉಪಯೋಗ
- ✳ ಸ್ವಚ್ಛ ಭಾರತ ಅಭಿಯಾನ